ಶ್ರೀ ವೈ.ಎಸ್.ವಿ. ದತ್ತಾ: ಸಚಿವರೆ, ಸೇರಿಸಿ ಹೇಳಿಬಿಡಿ. ಏಕೆಂದರೆ ವಯೋಮಿತಿ ಮೀರುತ್ತಿದೆ. ಅವರೆಲ್ಲ C. PEd ಮಾಡಿಕೊಂಡಿದ್ದಾರಲ್ಲ, ದೈಹಿಕ ಶಿಕ್ಷಣ ಪಡೆದುಕೊಂಡವರಿಗೆ ಇದುವರೆಗೆ ನೇಮಕ ಮಾಡಿಕೊಳ್ಳದವರಿಗೆ age bar ಆಗುತ್ತಿದೆ. ವಯೋಮಿತಿ ಮೀರುತ್ತಿದೆ.

ಶ್ರೀ ಕಿಮ್ಮನೆ ರತ್ನಾಕರ್:– ಮಾನ್ಯ ಅಧ್ಯಕ್ಷರೆ, ದತ್ತಾರವರು ಕೇಳುತ್ತಿರುವುದು ಬೇರೆ. ಅವರು ಕೇಳುವುದು ಏನಿದೆ. ಪದವಿ ಪೂರ್ವ ಕಾಲೇಜಿನಲ್ಲಿ 20 vacancies ಏನಿತ್ತು, ಅದು approve ಆಗಿದೆ, ಸದ್ಯದಲ್ಲಿಯೇ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಅಧ್ಯಕ್ಷರು: ನೇಮಕ ಮಾಡುವುದಕ್ಕೆ.

ಶ್ರೀ ಕಿಮ್ಮನೆ ರತ್ನಾಕರ್:– ಹೌದು ಸರ್.

ಅಧ್ಯಕ್ಷರು: ಓ.ಕೆ. ಸಚಿವರೆ ಒಂದು ಕೆಲಸ ಮಾಡಿ. ನೀವು application ಕರೆದು interview ಮಾಡಿ ಮಾಡುವುದಕ್ಕಿಂತ merit basis ಮೇಲೆ ಮಾಡಿ ಬಿಸಾಕಿ. ಈಗ ರಾಜೀವ್ ಪಿ. ರವರ ಪ್ರಶ್ನೆ.

RMSA ಯೋಜನೆಯಡಿಯಲ್ಲಿ ಶಾಲೆಯ ಪ್ರಾರಂಭ

115(1726); ಶ್ರೀ ರಾಜೀವ್ ಪಿ. (ಕುಡಚಿ)

ಅ) ರಾಜ್ಯದಲ್ಲಿ 2015–16ನೇ ಸಾಲಿಗೆ RMSA ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರ ಹೊಸದಾಗಿ ಪ್ರೌಢಶಾಲೆಗಳಿಗೆ ಮಂಜೂರು ಮಾಡುವ ಪ್ರಸ್ತಾವನೆ ಇದೆಯೇ;

ಆ) ಕುಡುಚಿ ಮತ ಕ್ಷೇತ್ರದ ಶೈಕ್ಷಣಿಕವಾಗಿ ಹಿಂದುಳಿದಿರುವ ಕ್ಷೇತ್ರವಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, 2015–16ನೇ ಸಾಲಿನಲ್ಲಿ ಕುಡುಚಿ ಕ್ಷೇತ್ರಕ್ಕೆ ಸದರಿ ಯೋಜನೆ ಅಡಿಯಲ್ಲಿ ಹೊಸದಾಗಿ ಪ್ರೌಢಶಾಲೆಗೆ ಮಂಜೂರಾತಿ ನೀಡಲಾಗುವುದೇ;

ಈ) ಸದರಿ ಯೋಜನೆಯಡಿಯಲ್ಲಿ ಹೊಸದಾಗಿ ಪ್ರೌಢಶಾಲೆ ಮಂಜೂರು ಮಾಡಲು ಅನುಸರಿಸುತ್ತಿರುವ ಮಾನದಂಡಗಳೇನು;

ಉ) ಹೊಸದಾಗಿ ಪ್ರೌಢಶಾಲೆ ಮಂಜೂರು ಮಾಡಬೇಕಾದರೆ 5 ಕಿಮೀ ಹತ್ತಿರ ಯಾವುದೇ ಖಾಸಗಿ ಅಥವಾ ಸರ್ಕಾರಿ ಶಾಲೆ ಇರಬಾರದೆಂಬ ನಿಯಮವಿದೆಯೇ;

ಹಾಗಿದ್ದಲ್ಲಿ, 05 ಕಿ.ಮೀ. ಹತ್ತಿರವಿರುವ ಖಾಸಗಿ ಶಾಲೆಗಳು ಯಾವುದೇ ಮೂಲಭೂತ ಸೌಕರ್ಯವಿಲ್ಲದೇ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದ್ದಲ್ಲಿ, ಸದರಿ ಯೋಜನೆಯಡಿಯಲ್ಲಿ ಹೊಸದಾಗಿ ಪ್ರೌಢಶಾಲೆಯನ್ನು ಮಂಜೂರು ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು?

ಶ್ರೀ ಕಿಮ್ಮನೆ ರತ್ನಾಕರ (ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಅ) ಹೌದು.

ಆ) ಬಂದಿದೆ.

ಇ) 2015–16ನೇ ಸಾಲಿಗೆ ಕುಡುಚಿ ಕ್ಷೇತ್ರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಿಲಾಜಿ ಶಾಲೆಯನ್ನು ಉನ್ನತೀಕರಿಸಲು ಜಿಲ್ಲೆಯಿಂದ ಪ್ರಸ್ತಾವನೆ ಬಂದಿರುತ್ತದೆ. ಕೇಂದ್ರ ಸರ್ಕಾರ ಈ ಶಾಲೆ ಆರ್.ಎಂ.ಎಸ್.ಎ ನಿಯಮಗಳಡಿಯಲ್ಲಿ ಬರುವುದಿಲ್ಲವಾದ್ದರಿಂದ ಉನ್ನತೀಕರಿಸಲು ಒಪ್ಪಿರುವುದಿಲ್ಲ.

ಈ) ಆರ್.ಎಂ.ಎಸ್.ಎ. ಕಾರ್ಯಕ್ರಮದಡಿಯಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಪ್ರೌಢಶಾಲೆಯನ್ನಾಗಿ ಉನ್ನತೀಕರಿಸಲು ಈ ಕೆಳಗಿನ ಮಾನದಂಡಗಳನ್ನು ಕೇಂದ್ರ ಸರ್ಕಾರ ನಿಗದಿಪಡಿಸಿದೆ.

- ಉನ್ನತೀಕರಿಸಬೇಕಾದ ಶಾಲೆಯಲ್ಲಿ 8ನೇ ತರಗತಿ ಇರಬೇಕು.

- ಈ ಶಾಲೆಯ 5 ಕಿ.ಮೀ. ವ್ಯಾಪ್ತಿಯೊಳಗೆ ಯಾವುದೇ ಪ್ರೌಢಶಾಲೆ ಇರಬಾರದು.
- ಈ ಶಾಲೆಗೆ 9ನೇ ತರಗತಿಗೆ 70 ವಿದ್ಯಾರ್ಥಿಗಳು ದಾಖಲಾಗುವಂತಿರಬೇಕು.

ಊ) ಹೌದು ಆರ್.ಎಂ.ಎಸ್.ಎ ಕಾರ್ಯಕ್ರಮದಡಿಯಲ್ಲಿ ಮಂಜೂರು ಮಾಡಲು ಕೇಂದ್ರ ಸರ್ಕಾರದ ನಿಯಮವಿರುತ್ತದೆ.

ಬಂದಿದೆ.

ಕೇಂದ್ರ ಸರ್ಕಾರ ಸೂಚಿಸಿರುವ ನಿಯಮಾವಳಿಗಳ ಪ್ರಕಾರ ಅವಕಾಶವಿಲ್ಲ ಹಾಗೂ ರಾಜ್ಯ ವಲಯದಡಿ ಹೊಸದಾಗಿ ಪ್ರೌಢ ಶಾಲೆಗಳನ್ನು ಪ್ರಾರಂಭಿಸುತ್ತಿಲ್ಲ.

ಶ್ರೀ ಪಿ. ರಾಜೀವ್: ಮಾನ್ಯ ಅಧ್ಯಕ್ಷರೆ, ಉತ್ತರಲ್ಲಿ ಬರೆಯುತ್ತಾರೆ. 2015–16ನೇ ಸಾಲಿಗೆ ಕುಡಚಿ ಕ್ಷೇತ್ರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಿಲಾಜಿ ಶಾಲೆಯನ್ನು ಉನ್ನತೀಕರಿಸಲು ಜಿಲ್ಲೆಯಿಂದ ಪ್ರಸ್ತಾವನೆ ಬಂದಿರುತ್ತದೆ. ಕೇಂದ್ರಸರ್ಕಾರ ಈ ಶಾಲೆ ಆರ್.ಎಂ.ಎಸ್.ಎ. ನಿಯಮಗಳಡಿಯಲ್ಲಿ ಬರುವುದಿಲ್ಲವಾದ್ದರಿಂದ ಉನ್ನತೀಕರಿಸಲು ಒಪ್ಪಿರುವುದಿಲ್ಲ ಎಂದು. ತಮ್ಮ ಮೂಲಕ ಸಚಿವರ ಗಮನಕ್ಕೆ ತರುತ್ತೇನೆ. ನಿಲಾಜಿ ಗ್ರಾಮದಿಂದ ಅತ್ಯಂತ ಹತ್ತಿರ ಇರುವ ಯಾವುದಾದರೂ ಶಾಲೆ ಇದ್ದರೆ ಹಾರುಗೇರಿ 12 ಕಿ.ಮೀ ಆಗುತ್ತದೆ, ಕೇಮಲಾಪುರ 15 ಕಿ.ಮೀ ಆಗುತ್ತದೆ. ಪರಮಾನಂದವಾಡಿ ಎನ್ನುವ ಗ್ರಾಮ 16 ಕಿ.ಮೀ ಆಗುತ್ತದೆ. ಕುಡಚಿ 15 ಕಿ.ಮೀ ಆಗುತ್ತದೆ. ಆ ಶಾಲೆಯಿಂದ Aided school ಯಾವುದೂ ಕೂಡಾ 15 ಕಿ.ಮೀ, 12 ಕಿ.ಮೀ ಒಳಗಿಲ್ಲ. ನಿಮ್ಮ ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟಿದ್ದಾರೆ. ತಾವು ಸೂಕ್ತವಾದ ನಿರ್ದೇಶನವನ್ನು ಅವರಿಗೆ ಕೊಡಬೇಕು. ಆರ್.ಎಂ.ಎಸ್.ಎ. ನಿಯಮಗಳಡಿಯಲ್ಲಿಯೇ ಬರುತ್ತದೆ. ಕೂಡಲೇ ಶಾಲೆ ಮಂಜೂರು ಮಾಡುವುದಕ್ಕೆ ಕ್ರಮ ಜರುಗಿಸಲು ತಾವು ಕ್ರಮ ಕೈಗೊಳ್ಳಬೇಕು.

ಶ್ರೀ ಕಿಮ್ಮನೆ ರತ್ನಾಕರ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ನಮ್ಮ ಇಲಾಖೆಯಲ್ಲಿ ಎರಡು ರೀತಿಯ ನಿಯಮವಿದೆ. ಹೈಸ್ಕೂಲ್ ಮಂಜೂರು ಮಾಡಬೇಕಾದರೆ state exchequer ನಿಂದ ಮಂಜೂರು ಮಾಡುವಂತಹುದು. ಇನ್ನೊಂದು central government ಕೊಡುವಂತಹದು. ಇದಕ್ಕೆ ನಾವು recommend ಮಾಡಿರುವುದು Central Government ನಿಂದ ಆಗುವಂತಹದು. Central Government ನಿಂದ ಏನು ಮಾಡುತ್ತಾರೆಂದರೆ ಪಕ್ಕದಲ್ಲಿ ಅಥವಾ ಖಾಸಗಿ ಶಾಲೆಯಲ್ಲಿ ಯಾವುದೇ ಇನ್ನೊಂದು ಶಾಲೆ ಇದ್ದರೂ ಕೂಡಾ 5 ಕಿ.ಮೀ. ಒಳಗಿರಬಾರದೆಂದು ಇದೆ. ಇವರು ಹೇಳುವ ಪ್ರಕಾರ ಯಾವುದೂ ಇಲ್ಲವೆಂದು ಹೇಳುತ್ತಿದ್ದಾರೆ. ಅದನ್ನು ಮನಗಂಡು suppose ಆ ರೀತಿ ಇದ್ದರೆ ಖಂಡಿತ ಮಾಡುತ್ತೇವೆ. Totally ನಾವು recommend ಮಾಡಿದ್ದು central government ಗೆ. They have rejected it.

ಅಧ್ಯಕ್ಷರು: ನೀವು ಅಲ್ಲಿ ಡಿ.ಡಿ.ಪಿ.ಐ ಗೆ ಎಲ್ಲಾ details ಕೊಡಿ.

ಶ್ರೀ ಕಿಮ್ಮನೆ ರತ್ನಾಕರ್:– ನಾನೂ ಅದನ್ನು personal ಆಗಿ ಹೇಳುತ್ತೇನೆ.

ಶ್ರೀ ಪಿ. ರಾಜೀವ್: ಅಲ್ಲಿಂದ ವರದಿ ಕೂಡಾ ಬಂದಿದೆ.

ಅಧ್ಯಕ್ಷರು: ಆಯಿತು. ಈಗ ಕೆ.ಎಂ. ತಿಮ್ಮರಾಯಪ್ಪರವರ ಪ್ರಶ್ನೆ.